**ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003**

# ಪ್ರಕಟಣೆ

**ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–3/2015–16 ದಿನಾಂಕ: 23.03.2016**

## 555 ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ

* * * * *

ದಿನಾಂಕ: 25.01.2017 ರ ಪ್ರಕಟಣೆಯನ್ನು ಮುಂದುವರೆಸುತ್ತಾ, 555 ಅರಣ್ಯ ರಕ್ಷಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ ಅನುಚ್ಛೇದ 371(ಜೆ) ಯ ತಿದ್ದುಪಡಿಯನ್ನು ಅನುಷ್ಠಾನಗೊಳಿಸುವ ಕುರಿತಂತೆ ಕರ್ನಾಟಕ ಅರಣ್ಯ ಇಲಾಖೆಯು ಕೈಗೊಂಡ ಕ್ರಮದ ಮಾಹಿತಿಯನ್ನು ಅಭ್ಯರ್ಥಿಗಳ ಗಮನಕ್ಕೆ ತರಲಾಗಿದೆ.

1. ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ3/ಸಿಬ್ಬಂದಿ/103/2013–14 ದಿನಾಂಕ: 22.05.2014 ರಲ್ಲಿ ಭಾರತ ಸಂವಿಧಾನದ ಅನುಚ್ಛೇದ 371(ಜೆ) ಯನ್ನು ಅನುಷ್ಠಾನಗೊಳಿಸುವ ಕುರಿತಂತೆ ಹೊರಡಿಸಲಾಗಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ) ನೇಮಕಾತಿಯಲ್ಲಿ ಮೀಸಲಾತಿ ಆದೇಶ 2013 ರ ಕಂಡಿಕೆ (3) ಮತ್ತು (13) ರನ್ವಯ ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ ಸೀಮಿತವಾದ ಜಿಲ್ಲೆಗಳ ಕಛೇರಿಗಳು ಮತ್ತು ಕರ್ನಾಟಕ ಅರಣ್ಯ ಇಲಾಖೆಯ ರಾಜ್ಯ ಮಟ್ಟದ ಕಛೇರಿಗಳ ಸೇವೆಯಲ್ಲಿನ ಹುದ್ದೆಗಳಲ್ಲಿ ವೃಂದವಾರು ಹುದ್ದೆಗಳನ್ನು ಹೈದರಾಬಾದ್ – ಕರ್ನಾಟಕ ಪ್ರದೇಶದ ಮೀಸಲಾತಿ ನಿಯಮಗಳ ಅನುಸಾರ ಗುರುತಿಸಿ ರಾಜ್ಯ ಮಟ್ಟದ ಸ್ಥಳೀಯ ವೃಂದಲ್ಲಿ ಹೈದರಾಬಾದ್ – ಕರ್ನಾಟಕ ಪ್ರದೇಶದವರಿಗಾಗಿ ಗುರುತಿಸಲಾದ ಶೇಕಡ 8 ರಷ್ಟು ಹುದ್ದೆಗಳು ಹಾಗೂ ಪ್ರಾದೇಶಿಕ ಸ್ಥಳೀಯ ವೃಂದದಲ್ಲಿ ಹೈದರಾಬಾದ್ – ಕರ್ನಾಟಕ ಪ್ರದೇಶದವರಿಗಾಗಿ ಗುರುತಿಸಲಾದ ಸಮೂಹ ಗ್ರೂಪ್ "ಎ" (ಕಿರಿಯ ಶ್ರೇಣಿ) ಮತ್ತು ಸಮೂಹ ಗ್ರೂಪ್ "ಬಿ" ಹುದ್ದೆಗಳಲ್ಲಿ ಶೇಕಡ 75 ರಷ್ಟು ಹುದ್ದೆಗಳು, ಸಮೂಹ ಗ್ರೂಪ್ "ಸಿ" ಹುದ್ದೆಗಳಲ್ಲಿ ಶೇಕಡ 80 ರಷ್ಟು ಹುದ್ದೆಗಳು ಮತ್ತು ಸಮೂಹ ಗ್ರೂಪ್ "ಡಿ" ಹುದ್ದೆಗಳಲ್ಲಿ ಶೇಕಡ 85 ರಷ್ಟು ಹುದ್ದೆಗಳನ್ನು ಗುರುತಿಸಿ ಆದೇಶ ಹೊರಡಿಸಲಾಗಿದೆ. ಈ ಆದೇಶವು ಕರ್ನಾಟಕ ರಾಜ್ಯ ಪತ್ರದಲ್ಲಿ 05 ಜೂನ್ 2014 ರಲ್ಲಿ ಪ್ರಕಟಗೊಂಡಿರುತ್ತದೆ.

   ಅದರಂತೆ, ಅರಣ್ಯ ರಕ್ಷಕ ವೃಂದದಲ್ಲಿ ರಾಜ್ಯ ಮಟ್ಟದ ಸ್ಥಳೀಯ ವೃಂದಲ್ಲಿ ಹೈದರಾಬಾದ್ – ಕರ್ನಾಟಕ ಪ್ರದೇಶದವರಿಗಾಗಿ ಗುರುತಿಸಲಾದ ಶೇಕಡ 8 ರಷ್ಟು ಹುದ್ದೆಗಳು ಹಾಗೂ ಪ್ರಾದೇಶಿಕ ಸ್ಥಳೀಯ ವೃಂದದಲ್ಲಿ ಹೈದರಾಬಾದ್ – ಕರ್ನಾಟಕ ಪ್ರದೇಶದವರಿಗಾಗಿ ಗುರುತಿಸಲಾದ ಶೇಕಡ 80 ರಷ್ಟು ಹುದ್ದೆಗಳು ಅಂದರೆ, ಒಟ್ಟು 224 ಹುದ್ದೆಗಳನ್ನು ಗುರುತಿಸಲಾಗಿದೆ.

   **ಹೀಗಾಗಿ, ಅರಣ್ಯ ರಕ್ಷಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಹೈದರಾಬಾದ್ – ಕರ್ನಾಟಕ ಮೀಸಲಾತಿ ಕುರಿತಂತೆ ಈಗಾಗಲೇ ಸ್ಥಳೀಯ ವೃಂದವನ್ನು ರಚಿಸಿ ಅಧಿಸೂಚಿಸಲಾಗಿರುತ್ತದೆ.**

2. ಅರಣ್ಯ ರಕ್ಷಕ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ವ್ಯಕ್ತಿಗಳನ್ನು ಗುರುತಿಸಿ, ಅವರಿಂದ ಆಯ್ಕೆ ಪಡೆದು, ಆಯ್ಕೆಗೆ ಅನುಸಾರ ಅರಣ್ಯ ರಕ್ಷಕ ವೃಂದದ ಸ್ಥಳೀಯ ವೃಂದಕ್ಕೆ ಸೇರಲು ಹಂಚಿಕೆ ಮಾಡಲಾಗಿರುತ್ತದೆ. ನೇರ ನೇಮಕಾತಿಯಲ್ಲಿ ಈ ಹಿಂದೆ ಆಯ್ಕೆಗೊಂಡ ಒಟ್ಟು 224 ನೌಕರರು ಸ್ಥಳೀಯ ವೃಂದವನ್ನು ಸೇರಲು ಆಯ್ಕೆ ಮಾಡಿದ್ದು, ಇವರ ಆಯ್ಕೆಯನ್ನು ಪರಿಗಣಿಸಿ ಇವರನ್ನು ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಲಾಗಿರುತ್ತದೆ. ಈಗಾಗಲೇ ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಬಿ3/ಸಿಬ್ಬಂದಿ/ವಿವ–103/2013–14 ದಿನಾಂಕ: 30.09.2014 ಹಾಗೂ 20.08.2015 ರಲ್ಲಿ ಈ ಮಾಹಿತಿಯನ್ನು ಪ್ರಕಟ ಮಾಡಲಾಗಿರುತ್ತದೆ.

**ಹೀಗಾಗಿ, ಸ್ಥಳೀಯ ವೃಂದಕ್ಕೆ ನಿಗಧಿಪಡಿಸಿದ 224 ಹುದ್ದೆಗಳು ಭರ್ತಿಯಾದಂತಾಗಿದೆ. ಅರಣ್ಯ ರಕ್ಷಕ ವೃಂದದಲ್ಲಿ ಸ್ಥಳೀಯ ಹುದ್ದೆಗಳನ್ನು ಭರ್ತಿ ಮಾಡಲು ಯಾವುದೇ ಹುದ್ದೆಗಳು ಖಾಲಿ ಇರುವುದಿಲ್ಲ.**

3. ಸ್ಥಳಿಯೇತರ ವೃಂದದಲ್ಲಿ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಅರಣ್ಯ ರಕ್ಷಕರು ಸ್ಥಳೀಯ ವೃಂದಕ್ಕೆ ಸೇರಲು ಆಯ್ಕೆ ಬಯಸಿ ಸ್ಥಳೀಯ ವೃಂದಕ್ಕೆ ಸೇರಿರುತ್ತಾರೆ. ಹೀಗಾಗಿ, ಇವರು ಈ ಹಿಂದೆ ಆಯ್ಕೆ ಹೊಂದಿದ ರೋಸ್ಟರ್ ಬಿಂಧುವನ್ನು ಸ್ಥಳಿಯೇತರ ವೃಂದದಲ್ಲಿ ಪ್ರಸ್ತುತ ಸರಿದೂಗಿಸಬೇಕಾಗಿರುತ್ತದೆ. ಒಟ್ಟು 80 ಅರಣ್ಯ ರಕ್ಷಕರು ಸ್ಥಳಿಯೇತರ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರ ಆಯ್ಕೆ ಅನುಸಾರ ಅವರನ್ನು ಸ್ಥಳೀಯ ವೃಂದಕ್ಕೆ ಹಂಚಿಕೆ ಮಾಡಲಾಗಿರುತ್ತದೆ. ಇವರ ರೋಸ್ಟರ್ ಬಿಂಧುವಿನ ಮಾಹಿತಿಯನ್ನು ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಬಿ9/ನೇಮಕಾತಿ/ವಿವ–3/2015–16 ದಿನಾಂಕ: 23.03.2016 ರ ಪುಟ ಸಂಖ್ಯೆ (2) ಮತ್ತು (3) ಹಾಗೂ (12) ರಿಂದ (16) ರಲ್ಲಿ ಪೂರ್ಣ ಮಾಹಿತಿ ನೀಡಲಾಗಿರುತ್ತದೆ.

4. **ಪ್ರಸ್ತುತ ಸ್ಥಳಿಯೇತರ ವೃಂದದಲ್ಲಿ ಖಾಲಿ ಇರುವ 475 ಅರಣ್ಯ ರಕ್ಷಕ ಹುದ್ದೆಗಳಿಗೆ ಮತ್ತು ಸ್ಥಳಿಯೇತರ ವೃಂದದ ರೋಸ್ಟರ್ ಬಿಂಧುವನ್ನು ಸರಿದೂಗಿಸುವ ಸಲುವಾಗಿ 80 ಅರಣ್ಯ ರಕ್ಷಕ ಹುದ್ದೆಗಳಿಗೆ ಒಟ್ಟು 555 ಅರಣ್ಯ ರಕ್ಷಕ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿರುತ್ತದೆ.**

5. ರಾಜ್ಯದ ಸ್ಥಳಿಯೇತರ ವೃಂದದ ಅಭ್ಯರ್ಥಿಗಳು ಹಾಗೂ ಸ್ಥಳೀಯ ವೃಂದದ ಅಭ್ಯರ್ಥಿಗಳು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಒಟ್ಟು 77180 ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಈಗಾಗಲೇ ದೈಹಿಕ ತಾಳ್ವಿಕೆ ಪರೀಕ್ಷೆ ಹಾಗೂ ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ ಮತ್ತು ಲಿಖಿತ ಪರೀಕ್ಷೆ ಬರೆಯಲು ಅರ್ಹ ಇರುವ ಅಭ್ಯರ್ಥಿಗಳ 1:20 (ಹುದ್ದೆ : ಅಭ್ಯರ್ಥಿ) ಪಟ್ಟಿಯನ್ನು ಮೆರಿಟ್ ಆಧಾರದ ಮೇಲೆ ಹಾಗೂ ರೋಸ್ಟರ್ ಬಿಂಧುಗಳ ಅನುಸಾರ ಈ ಪಟ್ಟಿಯನ್ನು ದಿನಾಂಕ: 07.10.2016 ರಲ್ಲಿ ಪ್ರಕಟಿಸಿ, ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

6. **ಪ್ರಸ್ತುತ 555 ಅರಣ್ಯ ರಕ್ಷಕ ಹುದ್ದೆಗಳಿಗೆ ಮೆರಿಟ್ ಆಧಾರದ ಮೇರೆಗೆ ರೋಸ್ಟರ್ ಬಿಂಧುಗಳ ಅನುಸಾರ ಹಾಗೂ ಎಲ್ಲಾ ಮೀಸಲಾತಿ ನಿಯಮಗಳ ಅನುಸಾರ ರಾಜ್ಯದ ಸ್ಥಳಿಯೇತರ ವೃಂದದ ಅಭ್ಯರ್ಥಿಗಳು ಹಾಗೂ ಸ್ಥಳೀಯ ವೃಂದದ ಅಭ್ಯರ್ಥಿಗಳು ಆಯ್ಕೆಗೆ ಅರ್ಹರಾಗಿದ್ದು, ಮೆರಿಟ್ ಹಾಗೂ ರೋಸ್ಟರ್ ಬಿಂಧುಗಳ ಆಧಾರದ ಮೇಲೆ ಯಾವ ಅಭ್ಯರ್ಥಿ ಆಯ್ಕೆ ಹೊಂದುತ್ತಾರೆಯೋ ಅವರನ್ನು ಪರಿಗಣಿಸಿ, 555 ಅರಣ್ಯ ರಕ್ಷಕ ಹುದ್ದೆಯ ತಾತ್ಕಾಲಿಕ ಅಯ್ಕೆ ಪಟ್ಟಿಯನ್ನು ದಿನಾಂಕ: 25.01.2017 ರಲ್ಲಿ ಪ್ರಕಟ ಮಾಡಲಾಗಿರುತ್ತದೆ.**

ಈ ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ಅಭ್ಯರ್ಥಿಗಳ ಗಮನಕ್ಕೆ ತರಲಾಗಿದೆ ಹಾಗೂ ನೇಮಕಾತಿಯ ಎಲ್ಲಾ ಪ್ರಕ್ರಿಯೆಗಳು ಪಾರದರ್ಶಕವಾಗಿ ನಿಯಮಾನುಸಾರ ಕರ್ನಾಟಕ ಅರಣ್ಯ ಇಲಾಖೆಯು ಕೈಗೊಳ್ಳಲಾಗುತ್ತಿದೆ. ಕಾಲಕಾಲಕ್ಕೆ ಎಲ್ಲಾ ಮಾಹಿತಿಗಳು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಗೊಳ್ಳುತ್ತದೆ. ಮೇಲ್ಕಂಡಂತೆ ನಮೂದಿಸಿರುವ ಎಲ್ಲಾ ಮಾಹಿತಿಗಳು ಈಗಾಗಲೇ ಇಲಾಖಾ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಬೆಂಗಳೂರು
ದಿನಾಂಕ: 02-02-2017

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)